


## ಸಮುದ್ರ ಮಥನ

### ಕ್ರೀಡಾಪಟುಗಳಿಗೆ ದಾರಿದೀಪ




ಇದೇ ತಾನೇ ಮುಗಿದಿರುವ ಫ್ರೆಂಚ್ ಓಪನ್ ಟೆನಿಸ್ ಹಾಗೂ ಸದ್ಯದಲ್ಲೇ ಪ್ರಾರಂಭವಾಗಲಿರುವ ಒಲಿಂಪಿಕ್ಸ್ ಕ್ರೀಡೆಗಳನ್ನು ಗಮನದಲ್ಲಿಟ್ಟುಕೊಂಡು 'ಸುಧಾ' ಪ್ರಕಟಿಸಿರುವ ಜೂನ್ 21ರ ಮುಖಪುಟ ಲೇಖನಗಳು (ಡಾ.ಕಿರಣ ಕುಲಕರ್ಣಿ) ಕ್ರೀಡಾಪಟುಗಳಿಗೆ ಉಪಯುಕ್ತವಾಗಿವೆ.

–ಶ್ರುತಿ ಕೆ.ಮಠದ, ಚಿತ್ರದುರ್ಗ/ ಕಾಳೀಹುಂಡಿ ಶಿವಕುಮಾರ್, ಮೈಸೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಕನ್ನಡಿಗರ ಹೆಮ್ಮೆ

ಕನ್ನಡಿಗ ಪ್ರೊ.ಶೇಷಣ್ಣ ಕ್ರೀಡಾ ವೈದ್ಯಕೀಯ ತಜ್ಞರಾಗಿರುವುದು ಸಂತೋಷದ ವಿಷಯ. ಆದರೆ ಭಾರತೀಯ ಕ್ರೀಡೆಗೆ ಹುಷಾರಿಲ್ಲ ಎಂಬುದು ಸಾರ್ವಕಾಲಿಕ ಸತ್ಯ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಸುಂದರ ಚಿತ್ರಗಳು

ಬುಲ್‌ಬುಲ್ ಹಕ್ಕಿ ಕುರಿತ ಗ.ಮ.ತುಂಬೇಮನೆ ಚಿತ್ರಗಳು ಸುಂದರವಾಗಿದ್ದವು.

–ಕಲಾವಿದ ಸೀನು, ಚಿತ್ರದುರ್ಗ/ ಎಸ್.ನಿತ್ಯ, ಮೂಡಬಿದರೆ

### ಬರಲಿ ಕೃತಕ ಬಿಡಿ ಭಾಗ

'ಬರಲಿದೆ ದೇಹದ ಬಿಡಿ ಭಾಗಗಳು' ಡಾ.ಎಚ್.ಎಸ್.ಮೋಹನ್‌ರ ಲೇಖನ ಇಷ್ಟವಾಯಿತು. ಕೃತಕ ಜೋಡಣೆಯಿಂದ ಮಾನವರಿಗೆ ಬಹಳಷ್ಟು ಉಪಯೋಗ ಇದೆ.

–ಚೈತ್ರಾ ಕುಕ್ಕೆಮನೆ, ಬೆಂಗಳೂರು

### ಪುಸ್ತಕಗಳ ಗೋಪುರ!

ವಿದ್ಯಾ ಹಾಲಭಾವಿಯವರ 'ಲಿಂಕನ್ ಪುಸ್ತಕ ಗೋಪುರ' ಚಿತ್ರ ಬರಹ ಗಮನ ಸೆಳೆಯುವಂತಿದೆ.

–ಎಚ್.ಆನಂದಕುಮಾರ್, ಚಿತ್ರದುರ್ಗ/ ಎಸ್.ಚನ್ನಪ್ಪ, ಮೈಸೂರು/ ರವೀಂದ್ರನಾಥ ಯಡಹಳ್ಳಿ, ಬೀಳಗಿ

### ಅಪ್ಪನ ನೆನಪು

ಮೇಲು ನೋಟಕ್ಕೆ ಗಡಸು ಸ್ವಭಾವದವನಾಗಿ ಕಂಡರೂ ಮನದಲ್ಲಿ ಅಗಾಧವಾಗಿ ಪ್ರೀತಿ ವಾತ್ಸಲ್ಯ ಇರಿಸಿಕೊಂಡು ಕುಟುಂಬದ ಜವಾಬ್ದಾರಿ ಹೊರುವ ಅಪ್ಪನನ್ನು 'ಸುಧಾ' ನೆನಪಿಸಿಕೊಂಡದ್ದು ಸಾರ್ಥಕವಾಗಿತ್ತು.

–ವಿಭಾ ಮುರಳೀಧರ್, ತುಮಕೂರು

### ಕಣ್ಣು ತೆರೆಸುವಂತಿದೆ

ಹೆಲ್ತ್‌ಪ್ಲಸ್‌ನಲ್ಲಿ ದಿನಕ್ಕೆ 'ಎಂಟು ಲೋಟ ನೀರು; ತಪ್ಪು ತಿಳಿವಳಿಕೆ' ಎಂಬ ಟಿಪ್ಸ್ ಎಲ್ಲರ ಕಣ್ಣು ತೆರೆಸುವಂತಿದೆ.

–ನಾರಾಯಣ ಯಾಜಿ, ಶಿರಾಲಿ

### ಅಪರೂಪದ ಕಥೆ

ಮಾಯಾ ವಿ.ಶೈಣೈ ಅವರ 'ಎಲೆ ಮರೆಯ ಹೂ' ಅಪರೂಪದ, ಮನೋಜ್ಞ, ಕೌಟುಂಬಿಕ ಕಥೆ.

–ರಾಜಶೇಖರ ಹಾದಿಮನಿ, ಧಾರವಾಡ

### ನಟಿಯ ವರಸೆಗೆ ದಂಗಾದೆ!

ಪಾಕಿಸ್ತಾನದಲ್ಲಿ ಎಲ್ಲ ಹೆಣ್ಣುಮಕ್ಕಳು ಬುರ್ಖಾ ಹಾಕಿಕೊಂಡೇ ತಿರುಗುತ್ತಾರೆ ಎಂದು ಭಾವಿಸಿದ್ದೆ. ಆದರೆ ಸೆಲೆಬ್ರಿಟಿಯಲ್ಲಿ ವೀಣಾ ಮಲಿಕ್ ಎಂಬ ಆ ದೇಶದ ನಟಿಯ ಬಗ್ಗೆ 'ಹನಿ' ಬರೆದಿರುವುದನ್ನು ಓದಿ ದಂಗಾದೆ. ಪಾಕಿಸ್ತಾನದ ನಟಿಯೂ ಭಾರತೀಯ ಚಿತ್ರನಟಿಗಿಂತ ಬಿಚ್ಚುವುದರಲ್ಲಿ ಮುಂದಿದ್ದಾರೆ ಎಂದು ತಿಳಿದು ಮತ್ತೊಮ್ಮೆ ದಂಗಾದೆ.

–ಎಚ್.ಆರ್.ದೇಸಾಯಿ, ರಾಯಚೂರು

### ಅಚ್ಚುಮೆಚ್ಚಿನ 'ಸುಧಾ'

ಶಿಕ್ಷಣ, ಪ್ರವಾಸ, ಆರೋಗ್ಯ, ಕ್ರೀಡೆ, ಸಿನಿಮಾ, ಜಾಣರ ಪೆಟ್ಟಿಗೆ, ಮಕ್ಕಳ ಪುಟ, ಕಥೆ, ಧಾರಾವಾಹಿ, ವಂಡರ್‌ಪುಟ, ಹಾಸ್ಯ... ಹೀಗೆ ಎಲ್ಲಾ ವಿಷಯಗಳ ಕುರಿತು ಲೇಖನ ಪ್ರಕಟಿಸುತ್ತಾ ಸರ್ವಾಂಗ ಸುಂದರಿಯಾಗಿ 'ಸುಧಾ' ಕಂಡುಬರುತ್ತಿದ್ದಾಳೆ.

–ಪಿ.ಎಸ್. ನಾರಾಯಣ ಭಟ್, ಕೊಯಿಲ ತೋಟ, ಪುತ್ತೂರು

### ನಂಬರ್ ಒನ್ 'ಸುಧಾ'

ನಂಬರ್ ಒನ್ 'ಸುಧಾ' ಸಂದೇಹವೇ ಇಲ್ಲ. ಬಸ್ಸಿನಲ್ಲಿ ಕುಳಿತ ನನಗೆ ಪೇಪರ್ ಓದಬೇಕೆನಿಸಿತು. ಅಷ್ಟರಲ್ಲಿ ಪೇಪರ್ ಹೊತ್ತ ಹುಡುಗ ಬಸ್ಸಿನೊಳಗೆ ಬಂದು ಪ್ರಜಾವಾಣಿ, ತರಂಗ ಎನ್ನುತ್ತಾ ನನ್ನ ಬಳಿ ಬಂದ. 'ಸುಧಾ' ವಾರಪತ್ರಿಕೆ ಕೊಡಪ್ಪ ಎಂದೆ. ಬೆಳಿಗ್ಗೆನೆ 20 ಪ್ರತಿಗಳನ್ನು ಗಂಗಾವತಿ ಬಸ್ ಡ್ರೈವರ್ ಕೊಂಡ್ಕೊಂಡ್ರು ಎನ್ನುತ್ತಿದ್ದಂತೆಯೇ ನಿರಾಶೆಯಾಯಿತು. 'ಸುಧಾ'ಳನ್ನು ಸರಿಗಟ್ಟುವ ಯಾವುದಾದರೂ ವಾರಪತ್ರಿಕೆ ಇದ್ದರೆ ತಿಳಿಸಿದಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡುತ್ತೇನೆ.

–ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ